MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:101 ENGLISH DAILY Subscription Yearly - Rs. - THURSDAY 2-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪ್ರಥಮ ಬಾರಿಗೆ ಲ್ಯಾಟಿನ್ ಅಮೇರಿಕಾಕ್ಕೆ ಭಾರತದ ಬಾಸ್ಮತಿ ಅಕ್ಕಿ

ಪ್ರಥಮ ಬಾರಿಗೆ ಭಾರತೀಯ ಬಾಸ್ಮತಿ ಅಕ್ಕಿ ಖರೀದಿ ಮಾಡಲಿರುವ ಲ್ಯಾಟಿನ್ ಅಮೇರಿಕಾ ದೇಶಗಳು ಈಗಾಗಲೇ ಖರೀದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಿವೆಯೆನ್ನಲಾಗಿದ್ದು, ಮುಂದಿನ ದಿನಗಳಲ್ಲಿ ರಫ್ತು ಆರಂಭವಾಗಲಿದೆಯೆನ್ನಲಾಗಿದೆ. ಇದರಿಂದ ಭಾರತೀಯ ಬಾಸ್ಮತಿ ಇರಾನ್ ಗೆ ಪರ್ಯಾಯ ಮಾರುಕಟ್ಟೆ ದೊರಕಿದೆಯೆನ್ನಲಾಗಿದೆ. ಈ ವರ್ಷ ಬಾಸ್ಮತಿ ಅಕ್ಕಿ ಫಸಲು ಕಡಿಮೆಯಾಗಿದ್ದು, ದರ 20 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.

## ಡಿಸೆಂಬರ್ 2021 ತಿಂಗಳಿಗೆ 21.5 ಲಕ್ಷ ಟನ್ ಸಕ್ಕರೆ ದೇಶೀ ಮಾರಾಟ ಕೋಟಾ

ಡಿಸೆಂಬರ್ ತಿಂಗಳ ದೇಶೀ ಮಾರಾಟಕ್ಕೆ 21.5 ಲಕ್ಷ ಟನ್ ಸಕ್ಕರೆ ಕೋಟಾ ನಿಗದಿಪಡಿಸಿದ ಸರಕಾರ, 2020 ಡಿಸೆಂಬರ್ ತಿಂಗಳಲ್ಲೂ ಇಷ್ಟೇ ಪ್ರಮಾಣದ ಸಕ್ಕರೆ ಬಿಡುಗಡೆಯಾಗಿತ್ತು. ಇದರೊಂದಿಗೆ ಹಿಂದಿನ ತಿಂಗಳ ಕೋಟಾದಲ್ಲಿ ಮಾರಾಟವಾಗದೆ ಉಳಿದ ಸಕ್ಕರೆಯನ್ನು ಮಾರಾಟ ಮಾಡಬಹುದೆಂದು ಪ್ರಕಟನೆ ತಿಳಿಸಿದೆ. ಹಿಂದಿನ ಕೆಲವು ದಿನಗಳಿಂದ ಇಳಿಕೆಯ ಹಾದಿಯಲ್ಲಿದ್ದ ಸಕ್ಕರೆ ದರ ಸಧ್ಯ ಸ್ಥಿರವಾಗಿರುವ ಸಾಧ್ಯತೆಯಿದೆಯೆನ್ನಲಾಗಿದೆ. 2021-22 ರಲ್ಲಿ 1.8 ಮಿಲಿಯನ್ ಟನ್ ಗಳಷ್ಟು ಸಕ್ಕರೆ ಜಾಗತಿಕ ಕೊರತೆಯಾಗಲಿದೆಯೆನ್ನಲಾಗಿದೆ. ಜಾಗತಿಕ ಬೇಡಿಕೆ 188.4 ಮಿಲಿಯನ್ ಟನ್ ಹಾಗೂ ಉತ್ಪಾದನೆ 186.1 ಮಿಲಿಯನ್ ಟನ್ ಗಳಾಗಬಹುದೆಂದು ಅಂದಾಜಿಸಲಾಗಿದೆ.